# 77

# ಬಿರುಗಾಳಿಯಿಂದ ಪಾರು

# (27:21-28:2)

ಹಡಗಿನಲ್ಲಿದ್ದ ಪ್ರಯಾಣಿಕರು ಹಾಗೂ ಪೌಲನು ಕೈಸರೈಯಿಂದ ರೋಮಾಯದ ಪ್ರಯಾಣವನ್ನು ಕರಾವಳಿಯ ಮೂಲಕ ಆರಂಭಿಸಿದರು. ಅವರು ಸೀದೋನಿನಿಂದ ಪಶ್ಚಿಮದ ಕಡೆಗೆ ಯಾನ ಮಾಡಲು ಯತ್ನಿಸಿದರೂ ವ್ಯತಿರಿಕ್ತವಾದ ಹವಾಮಾನದ ನಿಮಿತ್ತ ಅವರ ಪ್ರಯಾಣ ಕಷ್ಟಕರವಾಯಿತು. ಅವರು ಸ್ವಲ್ಪ ಸ್ವಲ್ಪವಾಗಿ ಮುಂದುವರಿದು, ಒಂದು ವಾರದ ನಂತರ ಕ್ರೇತ ದ್ವೀಪಕ್ಕೆ ಬಂದರು ನಂತರ ತಾತ್ಕಾಲಿಕ ಆಶ್ರಯಪಡೆದರು. ನಂತರ ಸುರಕ್ಷಿತ ವಾದ ಬಂದರಿಗೆ ಹೋಗಬೇಕೆಂದು ಯತ್ನಿಸಿದಾಗ ಅವರು ಪ್ರವಾಹದಲ್ಲಿ ಸಿಲುಕಿಕೊಂಡರು - ಅದು ನಿಲ್ಲಲೇ ಇಲ್ಲ.

> ದಿನದಿಂದ ದಿನಕ್ಕೆ, ರಾತ್ರಿಯಿಂದ ರಾತ್ರಿಗೆ ಭಯಾನಕ ಪರಿಸ್ಥಿತಿ ಉಂಟಾದರೂ, ಪರ್ವತದಂಥ ಸಮುದ್ರದಲ್ಲಿ ಸಿಲುಕಿದರು. ಬಹಳ ಮೋಡಗಳು ಅವರಿಗೆ ಅಡ್ಡಿ ಮಾಡಿದವು: ಹಡಗಿನ ಯಜಮಾನನಿಗೆ ಹಡಗು ಯಾವ ಸ್ಥಳದಲ್ಲಿದೆ ಎಂದು ಅರಿವಾಗಲಿಲ್ಲ ... ಅವರಲ್ಲಿದ್ದ ಗೋದಿಯು ಒದ್ದೆಯಾಗಿತ್ತು. ಆ ಚೀಲಗಳು ಭಾರವಾಗಿ, ಹಡಗು ಮುಳುಗುವ ಸ್ಥಿತಿಗೆ ಬಂತು.
>
> ಅಲ್ಲಿ ನೀರು ಹೆಚ್ಚಾಗಿ, ಹಡಗು ಮುಳುಗುವಂತಾದಾಗ, ಹನ್ನೊಂದು ಅಥವಾ ಹನ್ನೆರಡು ದಿವಸಗಳು ಕಳೆದು ಹೋದವು. ಸಂರಕ್ಷಣೆಗೊಳ್ಳುವ ನಿರೀಕ್ಷೆಯು ಹುಸಿಯಾಯಿತು.[1]

ಹಡಗಿನಲ್ಲಿದ್ದವರ ಅನುಭವವೇನು ಎಂದು ನೀವುಗಳು ಅರಿಯಲು ಸಾಧ್ಯವಿದೆ. ಇಂತಹ ಅನುಭವವನ್ನು ಪ್ರತಿಯೊಬ್ಬರೂ ಹೊಂದಲೂ ಸಾಧ್ಯವಿದೆ: ಕುಟುಂಬದ ಸಮಸ್ಯೆಗಳ ಬಿರುಗಾಳಿ, ಹಣದ ಸಮಸ್ಯೆಯ ಬಿರುಗಾಳಿ ವ್ಯವಹಾರದ ಸಮಸ್ಯೆಯ ಬಿರುಗಾಳಿ ವೈದ್ಯರು ನೀಡುವ ಆರೋಗ್ಯದ ವರದಿಯ ಸಮಯದಲ್ಲಿ, ಮಕ್ಕಳು ಅವಿಧೇಯರಾಗುವಾಗ, ಜನರು ನಮ್ಮನ್ನು ನಿರಾಕರಿಸುವಾಗ, ಈ ಸಂದರ್ಭಗಳಲ್ಲಿ ನಿರೀಕ್ಷೆಯು ಕಳೆದುಹೋಯಿತು ಎಂದು ತಿಳಿಯುತ್ತೇವೆ.

ಪೌಲನ ರೋಮಾಯದ ಪ್ರಯಾಣದ ಕುರಿತು ನಾವು ಆರಂಭಿಸುವಾಗ, ಅಲ್ಲಿ ಉಂಟಾದ ವ್ಯತಿರಿಕ್ತವಾದ ಗಾಳಿ ಹಾಗೂ ಬಿರುಗಾಳಿಯ ಪ್ರವಾಹದ ಕುರಿತು ಒತ್ತಿ ಹೇಳುತ್ತೇವೆ ಪೌಲನು ಈ ಸುಳಿಯಿಂದ ಹೇಗೆ ರಕ್ಷಿಸಲ್ಪಟ್ಟನು ಎಂದು ಈಗ ನೋಡೋಣ - ನೀವುಗಳು ಸಹ ಹೇಗೆ ಸಂರಕ್ಷಣೆ ಹೊಂದಬಹುದೆಂದು ತಿಳಿಯೋಣ. ಜೀವಿತದಲ್ಲಿ ಇಂತಹ ಸುಳಿಗಾಳಿಗೆ ಸಿಲುಕುವಾಗ, ನೀವು ಏಕಾಂಗಿಗಳಲ್ಲ ಎಂದು ನೀವುಗಳು ಅರಿಯಬೇಕು!

### ಸಾಧ್ಯತೆಗಳನ್ನು ನಿರೀಕ್ಷಿಸಿರಿ[2]

ಜೀವಿತದಲ್ಲಿ ಉಂಟಾಗಬಹುದಾದ ಬಿರುಗಾಳಿಯನ್ನು ಎದುರಿಸಬೇಕಾದರೆ, ಮಾನಸಿಕ ವಾಗಿ ಸಿದ್ಧವಾಗಿರಬೇಕು. ಯೇಸುವಿನ ನಾಮದ ನಿಮಿತ್ತ, ಪೌಲನು ರೋಮಾಯಕ್ಕೆ ಹೋಗುತ್ತಿದ್ದನೆಂದು ಅವನು ಸ್ಪಷ್ಟವಾಗಿ ಅರಿತ್ತಿದ್ದರೂ - ಅವನಿಗೆ ವ್ಯತಿರಿಕ್ತವಾದ ಗಾಳಿಯು ಬೀಸಿತು. ಅಂತಿಮವಾಗಿ ಸುಳಿಗಾಳಿಯು ನೀತಿವಂತರ ಹಾಗೂ ಅನೀತಿವಂತರ ಮೇಲೂ

ಬೀಸಿತು (ಮತ್ತಾಯ 5:45); ಒಳ್ಳೆಯವರ ಹಾಗೂ ಕೆಟ್ಟವರ ತಲೆಯಸುತ್ತಲು ಬಿರುಗಾಳಿಯು ಬೀಸಲಾರಂಬಿಸಿತು. ನೀವು ದೇವರಿಂದ ತೊರೆಯಲ್ಪಟ್ಟಿರುವಿರಿ ಎಂಬ ಸೂಚನೆಯು ಇದಾಗಿರುವದಿಲ್ಲ; ಅದು ಜೀವಿತದ ಒಂದು ಅವಿಭಾಜ್ಯ ಅಂಗ - ಕೆಲವು ಸಾರಿ ನಮ್ಮನ್ನು ಉತ್ತೇಜನ ಪಡಿಸುವದಕ್ಕಾಗಿ ದೇವರ ಯೋಜನೆಗಳಾಗಿವೆ. ಅದು ನಿಮ್ಮನ್ನು ಮೊಣಕಾಲುಗಳಿಗೆ ನಡಿಸಿದರು ನೀವು ಮೊಣಕಾಲೂರುವದಕ್ಕಾಗಿಯೇ ಈ ಕಾರ್ಯ ನಡೆದಿರಬಹುದು.

## ವಾಗ್ದಾನಗಳನ್ನು ಅರಿಕೆ ಮಾಡಿರಿ (27:21-26)

ಪೌಲನು ನಿರೀಕ್ಷೆ ಕಳಕೊಂಡವನಾದಾಗ, ಮೊಣಕಾಲೂರಿ ಪ್ರಾರ್ಥಿಸಿದನು. ಅವನ ಆ ರಾತ್ರಿಯ ಸಂಕಟದ ಸಮಯದಲ್ಲಿ ದೇವರಿಂದ ವಾಗ್ದಾನವನ್ನು ಪಡೆದನು. ಮರುದಿನ ಬೆಳಗ್ಗೆ ಈ ವಿಚಾರವನ್ನು ತಿಳಿಸಲು ಪೌಲನು ಸಿದ್ಧನಾದನು: "ಪೌಲನು ಅವರ ಮಧ್ಯದಲ್ಲಿ ನಿಂತುಕೊಂಡು - ಎಲೈ ಜನರೇ, ನೀವು ಕ್ರೇತದಿಂದ ಹೊರಟು ಈ ಕಷ್ಟನಷ್ಟಗಳಿಗೆ ಗುರಿಯಾಗದಂತೆ ನನ್ನ ಮಾತನ್ನು ಕೇಳಬೇಕಾಗಿತ್ತು" (ವಚನ 21ಬಿ) ಅಂದನು. (ಪೌಲನು ಅವರನ್ನು ಬೈಯದೇ ಮುಂದೆ ಆ ತಪ್ಪನ್ನು ಮಾಡಬಾರದೆಂಬ ಎಚ್ಚರಿಕೆಯನ್ನು ನೀಡಿದನು.) ನಂತರ ಅವನ ಎಚ್ಚರಿಕೆಯ ಮಾತುಗಳು, ಬಿರುಗಾಳಿಯ ಶಬ್ದಕ್ಕಿಂತಲೂ ಹೆಚ್ಚಾದ ಶಬ್ದವನ್ನು ಮಾಡಿತು:

> ಈಗಲಾದರೂ ನೀವು ಧೈರ್ಯದಿಂದಿರ ಬೇಕೆಂದು ನಿಮಗೆ ಬುದ್ಧಿಹೇಳುತ್ತೇನೆ; ಹಡಗು ನಷ್ಟವಾಗುವದೇ ಹೊರತು ನಿಮ್ಮಲ್ಲಿ ಒಬ್ಬರಿಗೂ ಪ್ರಾಣನಷ್ಟವಾಗುವದಿಲ್ಲ. ನಾನು ಯಾರವನಾಗಿದ್ದೇನೋ ಯಾರನ್ನು ಸೇವಿಸುತ್ತೇನೋ ಆ ದೇವರಿಂದ ಬಂದ ಒಬ್ಬ ದೂತನು ಕಳೆದ ರಾತ್ರಿಯಲ್ಲಿ[3] ನನ್ನ ಹತ್ತಿರ ನಿಂತು ಪೌಲನೇ, ಭಯಪಡಬೇಡ, ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು;[4] ಇದಲ್ಲದೆ ನಿನ್ನ ಸಂಗಡ ಈ ಹಡಗಿನಲ್ಲಿ ಪ್ರಯಾಣಮಾಡುವವರೆಲ್ಲರ ಪ್ರಾಣ ದೇವರು ನಿನ್ನ ಮೇಲಣ ದಯೆಯಿಂದ ಉಳಿಸಿ ಕೊಟ್ಟಿದ್ದಾನೆಂದು ನನ್ನ ಸಂಗಡ ಹೇಳಿದನು. ಆದದರಿಂದ ಜನರೇ ಧೈರ್ಯವಾಗಿರ್ರಿ ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದೆಂದು ದೇವರನ್ನು ನಂಬುತ್ತೇನೆ (ವಚನಗಳು 22-25).

ಪೌಲನು ತನ್ನ ಕ್ಷೇಮಕ್ಕಾಗಿಯೂ ಹಾಗೂ ಹಡಗಿನಲ್ಲಿದ್ದವರ ಕ್ಷೇಮಕ್ಕಾಗಿಯೂ ಸಹಜವಾಗಿ ಪ್ರಾರ್ಥಿಸುತ್ತಿದ್ದನು - ಹಾಗೂ ದೇವರು ಅವನ ಪ್ರಾರ್ಥನೆಗೆ ಉತ್ತರ ನೀಡಿದನು.[5] ನೀವು ಸುಳಿ ಗಾಳಿಯ ನಡುವೆ ಸಿಲುಕಿರುವಾಗ, ನಿಮಗಾಗಿ ಮಾತ್ರ ಚಿಂತಿಸಬಾರದು (1 ಕೊರಿಂಥ 10:13ಎ). ನಿಮಗಾಗಿಯೂ, ಪ್ರಾರ್ಥಿಸುವಂತೆಯೇ ಇತರರಿಗಾಗಿಯೂ ಪ್ರಾರ್ಥಿಸಬೇಕು (ಯಾಕೋಬ 5:16); ಎಲ್ಲದಕ್ಕಿಂತ ಹೆಚ್ಚಾಗಿ ಸ್ವಾರ್ಥವು ಮನುಷ್ಯನನ್ನು ಮುಳುಗಿಸಿಬಿಡುವದು.

ದೇವರ ವಾಗ್ದಾನವು ಕೆಟ್ಟ ಹಾಗೂ ಒಳ್ಳೆಯ ವರ್ತಮಾನವನ್ನು ಒಳಗೊಂಡಿತ್ತು: ಅವರ ಜೀವಿತಗಳು ಕ್ಷೇಮವಾದರೂ, ಹಡಗು ನಾಶವಾಗುವದಕ್ಕಿತ್ತು. ಆದ್ದರಿಂದ ಪೌಲನು, "ಆದರೆ ನಾವು ಯಾವುದೋ ಒಂದು ದ್ವೀಪದ ದಡವನ್ನು ತಾಕಬೇಕಾಗಿದೆ ಅಂದನು" (ವಚನ 26). ದೇವರು ಅವರನ್ನು ರಕ್ಷಿಸುವನು ಎಂದು ವಾಗ್ದಾನ ಮಾಡಿದ್ದರೂ, ಅದು ಸುಲಭ ಕಾರ್ಯವಾಗಿರಲಿಲ್ಲ. ಕಷ್ಟಕರ ಸಮಯವು ಮುಂದಿದ್ದರೂ, ದೇವರ ವಾಗ್ದಾನವು ಅವರನ್ನು ಕ್ಷೇಮವಾಗಿ ಇಟ್ಟಿತ್ತು.

ದೇವರು ನಿಮಗೆ ನಿರೀಕ್ಷೆಯ ಸಂದೇಶವನ್ನು ನೀಡುವನು. ಪೌಲನು ದೇವರನ್ನು ಸಂಧಿಸಿದ ಅನುಭವ ನಮಗೆಲ್ಲರಿಗೂ ಉಂಟಾಗದೆ ಇದ್ದರೂ, "ದೇವರ ಅತ್ಯದ್ಭುತವಾದ ವಾಗ್ದಾನಗಳು ನಮ್ಮ ಸಂಗಡ ಇರುತ್ತವೆ" (2 ಪೇತ್ರ 1:4; ಇಬ್ರಿಯ 8:6 ನೋಡಿರಿ) ಮತ್ತು

ಸಂದೇಶವು ಒಂದೇ ಆಗಿರುತ್ತದೆ: "ಆದ್ದರಿಂದ ಧೈರ್ಯಗೊಳ್ಳಬೇಕು" (ಕೀರ್ತನೆ 27:14; ಯೋಹಾನ 16:33)! ದೇವರು ನಮ್ಮನ್ನು ನಿರೀಕ್ಷೆ ಇಲ್ಲದವರನ್ನಾಗಿ ಬಿಟ್ಟಿರುವನು ಎಂಬದು ಸಮಸ್ಯೆಯಾಗಿರುವದಿಲ್ಲ.[6] ಆದರೆ ನಮ್ಮಲ್ಲಿ ನಂಬಿಕೆ ಕಡಿಮೆಯಾಗಿರುವದೇ ಸಮಸ್ಯೆಯಾಗಿರುತ್ತದೆ, ಆದರೆ ಪೌಲನು, "ನನಗೆ ಹೇಳಲ್ಪಟ್ಟ *ಪ್ರಕಾರವೇ* ಆಗುವದೆಂದು ದೇವರನ್ನು ನಂಬುತ್ತೇನೆ" ಅಂದನು (ಅಪೊಸ್ತಲರ ಕೃತ್ಯಗಳು 27:25ಬಿ; ಒತ್ತಿ ಹೇಳಿದ್ದು ನನ್ನದು; ಯೋಹಾನ 20:27 ನೋಡಿರಿ).

ಒಂದು ವೇಳೆ ನಾವು ಕೂಡ ಜೀವಿತದಲ್ಲಿನ ಸುಳಿಗಾಳಿಯನ್ನು ಎದುರಿಸಬೇಕಾದರೆ, ದೇವರ ವಾಗ್ದಾನಗಳನ್ನು ಮನನ ಮಾಡಬೇಕು. ಮೊದಲನೆಯದಾಗಿ ಈ ವಾಗ್ದಾನಗಳನ್ನು ನಮಗಾಗಿ ಮನನಮಾಡಬೇಕು. ಅದು ನಮ್ಮ ಹೃದಯದಲ್ಲಿ ಕಾರ್ಯಸಾಧಿಸುವಂತೆ ಪದೇ ಪದೇ ಮನನಮಾಡಿಕೊಳ್ಳಬೇಕು. ಅವುಗಳನ್ನು ನಾವು ಪ್ರತೀದಿನವು ನೋಡುವಂತೆ, ಬರೆದು ನಮ್ಮ ಮುಂದೆ ಇಟ್ಟುಕೊಳ್ಳಬೇಕು. ನಂತರ, ಪೌಲನಂತೆ ಅವುಗಳನ್ನು ಇತರರೊಂದಿಗೆ ಹಂಚಿಕೊಳ್ಳಬೇಕು.

ನಾವುಗಳು ವಾಗ್ದಾನಗಳನ್ನು ಮನನ ಮಾಡುವುದಾದರೆ, ನಮ್ಮ ಸಮಸ್ಯೆಗಳು ಹೊಗೆಯಂತೆ ಮಾಯವಾಗುತ್ತವೆಯೇ? ಬಹುಶಃ ಇಲ್ಲ. ದೇವರ ಸಂದೇಶದ ಕುರಿತು ಪೌಲನು ಹೇಳಿದಾಗ, ಬಿರುಗಾಳಿಯು ನಿಂತು ಹೋಗಲಿಲ್ಲ. ಮೋಡಗಳು ಮಾಯ ವಾಗಿ, ನಾವಿಕರು ಹಡಗನ್ನು ಸಹಜ ಸ್ಥಿತಿಗೆ ತರಲು ಸಾಧ್ಯವಾಗಲಿಲ್ಲ. ಬಾಹಿರವಾದ ಯಾವ ಬದಲಾವಣೆಯು ಉಂಟಾಗಲಿಲ್ಲ; ಬಿರುಗಾಳಿಯು ಇನ್ನೂ ಹೆಚ್ಚಾಯಿತು. ಆದರೆ ಅವರ ಅಂತರ್ಯದಲ್ಲಿ ಬದಲಾವಣೆ ಉಂಟಾಯಿತು; ಪೌಲನಿಗೂ ಅವನ ಸಂಗಡಿಗರಿಗೂ ಒಂದು ವಿಧವಾದ ವ್ಯತ್ಯಾಸದ ಅನುಭವ ಉಂಟಾಯಿತು. ಹಾಗೆಯೇ ನಾವು ಕೂಡ ನಮ್ಮ ಜೀವಿತದ ಬಿರುಗಾಳಿಯ ಸಂದರ್ಭದಲ್ಲಿ, ಕರ್ತನು ನೀಡಿರುವ ವಾಗ್ದಾನಗಳಲ್ಲಿ ಭರವಸವಿಡುವದಾದರೆ, ಬಾಹಿರವಾಗಿ ಯಾವುದೇ ಬದಲಾವಣೆಯ ಅಂತರ್ಯದಲ್ಲಿ ಉಂಟಾಗುತ್ತದೆ: "ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯ ಅನುಭವವನ್ನು ಅರಿಯುತ್ತೇವೆ" (ಫಿಲಿಪ್ಪಿ 4:7ಎ)!

## ಸಾನಿಧ್ಯವನ್ನು ಪ್ರದರ್ಶನ ಮಾಡಿರಿ (27:27-37)

ದೇವದೂತನು ಪೌಲನಿಗೆ "ಹಡಗು ಯಾವುದೋ ಒಂದು ದ್ವೀಪದ ದಡವನ್ನು ತಾಕುತ್ತದೆ" ಎಂದು ಹೇಳಿದ್ದನು (ವಚನ 26). ಆ ದ್ವೀಪದ ಹೆಸರು ಮೆಲೀತೆ (28:1), ಸುಳಿಗಾಳಿ ಉಂಟಾದ ಸ್ಥಳದಿಂದ ಸುಮಾರು ಐದು ನೂರು ಮೈಲುಗಳ ಅಂತರದಲ್ಲಿತ್ತು. "ಪೌಲನ ರೋಮಾಯದ ಪ್ರಯಾಣದ ನಕ್ಷೆಯನ್ನು" ನೋಡಿರಿ. ಮೆಲೀತೆಯು ಮೆಡಿಟೇರಿ ಯನ್‌ನಲ್ಲಿ ಇರಲಿಲ್ಲ. ಹಡಗು ಹೊಯ್ದಾಡುತ್ತಾ ಚಲಿಸುವಾಗ (27:27), ಆ ಚಿಕ್ಕ ದ್ವೀಪದ ಬಳಿಗೆ ಹಡಗು ಯಾವ ರೀತಿಯಲ್ಲಿ ಚಲಿಸಲು ಸಾಧ್ಯವಾಯಿತು? ಅಲ್ಲಿ ದೇವರೇ ಅದಕ್ಕೆ ನಾವಿಕನಾಗಿದ್ದನು. ಯಾವ ಸುಳಿಗಾಳಿಯು ಅವರ ಪ್ರಯಾಣಕ್ಕೆ ಮಾರಕವಾಗಿತ್ತೋ, ಅದನ್ನೇ ದೇವರು ಉಪಯೋಗಿಸಿದ್ದನು (ರೋಮಾಪುರ 8:28).

ದೇವರು ಎಂದೂ ತನ್ನವರನ್ನು ಬಿಟ್ಟು ಹೋಗುವದಿಲ್ಲ; ತನ್ನ ಕಾರ್ಯವನ್ನು ಅವರಲ್ಲಿ ಮುಂದುವರಿಸುವನು. "ಹದಿನಾಲ್ಕನೆಯ ರಾತ್ರಿ ಬಂದ ಮೇಲೆ ನಾವು ಅದ್ರಿಯ[7] ಸಮುದ್ರದಲ್ಲಿ ಅತ್ತ ಇತ್ತ ಬಡಿಸಿಕೊಂಡು ಹೋಗುತ್ತಿರುವಾಗ ನಾವಿಕರು ಬಂದು ದೇಶದ ಹತ್ತಿರ ಬಂದೆ ವೆಂದು ಹೇಳಿದರು" (ವಚನ 27). ಒಂದು ವೇಳೆ ಅವರು ತೀರಕ್ಕೆ ಬಡಿಯುತ್ತಿದ್ದ ಅಲೆಗಳ ಶಬ್ದವನ್ನು ಕೇಳಿರಬಹುದು. "... ದೇಶದ ಹತ್ತಿರ ಬಂದವೆಂದು ನೆನಸಿ ಅಳತೆ ಗುಂಡನ್ನು[8] ಇಳಿಸಿ ಇಪ್ಪತ್ತು ಮಾರುದ್ದವೆಂದು [120 ಅಡಿಗಳು] ಕಂಡರು; ಸ್ವಲ್ಪ ಹೊತ್ತಿನ ಮೇಲೆ ತಿರುಗಿ ಅಳತೆ ಗುಂಡನ್ನು ಇಳಿಸಿ ನೋಡಲಾಗಿ ಹದಿನೈದು ಮಾರುದ್ದವೆಂದು [90 ಅಡಿಗಳು] ಕಂಡರು" (ವಚನ 28). ಇಲ್ಲಿ ಹೆಚ್ಚಾದ ಕೆಟ್ಟ ಹಾಗೂ ಒಳ್ಳೆಯ ಸುದ್ದಿಯು ಇತ್ತು. ಅವರು ಭೂಮಿಯ

ಬಳಿ ಬಂದದ್ದು ಒಳ್ಳೆಯ ಸುದ್ದಿಯಾದರೆ, ಕತ್ತಲಿನಲ್ಲಿ ಅಪಾಯವು ಕಾದಿತ್ತು ಎಂಬುದು ಕೆಟ್ಟಸುದ್ದಿ. "ಬಂಡೇ ಸ್ಥಳವನ್ನು ತಾಕೇವೆಂದು ಭಯಪಟ್ಟು ಹಡಗಿನ ಹಿಂಭಾಗದಿಂದ ನಾಲ್ಕು ಲಂಗರಗಳನ್ನು[9] ಬಿಟ್ಟು ಯಾವಾಗ ಬೆಳಗಾದೀತು ಎಂದು ಹಾರೈಸುತ್ತಿದ್ದರು" (ವಚನ 29ಎ). ಸಾಮಾನ್ಯವಾಗಿ ಹಡಗುಗಳನ್ನು ಹಗ್ಗದಿಂದ ಬಿಗಿಯುತ್ತಿದ್ದರೇ (ಹಡಗಿನ ಮುಂಭಾಗದಲ್ಲಿ) ವಿನಃ, ಹಿಂಬದಿಯಿಂದಲ್ಲ (ಹಿಂಬದಿ). ಗಾಳಿಯು ಭೂಮಿಯ ಕಡೆಗೆ ಬೀಸುತ್ತಿದದ್ದರಿಂದ, ಬಿರುಗಾಳಿಯು ಭೂಮಿಗೆ ಬೀಸುವ ದಿಕ್ಕಿಗೆ ಹಡಗನ್ನು ನಿಲ್ಲಿಸಿದ್ದರು.

ಹಡಗನ್ನು ಸಂರಕ್ಷಿಸುವ ಕಾರ್ಯವನ್ನು ಮಾಡಿದ ನಂತರ, ಅವರು "ಬೆಳ ಗಾಗುವದೆಂದು" ಹಾರೈಸುತ್ತಿದ್ದರು (ವಚನ 29ಬಿ). ಅವರು ಬೆಳಗಾಗಲೀ ಎಂದು ಪ್ರಾರ್ಥಿಸಿದರು. ನಿಮ್ಮ ಜೀವಿತದ ಕತ್ತಲಿನಲ್ಲಿ ಉಂಟಾದ ಸಮಸ್ಯೆಗಳ ಕುರಿತು, ಬೆಳಗಾಗಲಿ ಎಂದು ನೀವು ಸಹ ಹಾರೈಸಿರಬಹುದು, ಒಂದು ವೇಳೆ ದೇವರು ದೂರವಾಗಿದ್ದಾನೆ, ಕತ್ತಲು ಅಂತ್ಯವಾಗುವದಿಲ್ಲವೆಂದು ತಿಳಿದಿರಬಹುದು.

ಕೆಲವು ಸಾರಿ ರಾತ್ರಿ ಸಮಯದಲ್ಲಿ ಭಯಗೊಂಡ ನಾವಿಕರಿಗೆ ಗೊಂದಲವು ಉಂಟಾಗಬಹದು. ಅವರು ಹಡಗಿನಲ್ಲಿ ಇರಲೇಬೇಕು ಎಂಬ ನಿಯಮವನ್ನು ಮೀರಬಹುದು, ಅವರು ತಮ್ಮ ಹೊರತಾಗಿ ಇತರರನ್ನು ಮರೆತಿರಲೂ ಬಹುದು. "ನಾವಿಕರು ಮುಂಭಾಗದಲ್ಲಿ ಲಂಗರನ್ನು ಹಾಕಬೇಕೆಂಬ ನೆವದಿಂದ ದೋಣಿಯನ್ನು ಸಮುದ್ರದಲ್ಲಿ ಇಳಿಸಿ ಹಡಗನ್ನು ಬಿಟ್ಟು ತಪ್ಪಿಸಿಕೊಂಡು ಹೋಗುವದಕ್ಕೆ ಪ್ರಯತ್ನಿಸಿದರು" (ವಚನ 30ಸಿ, ಡಿ).

ಹಡಗಿನಲ್ಲಿದ್ದ ಪೌಲನು ಇಂತಹ ಅನೇಕ ಅನುಭವಗಳನ್ನು ಹೊಂದಿದ್ದರಿಂದ, ನಾವಿಕರ ಈ ಕಾರ್ಯದ ನಿಮಿತ್ತ ಮೋಸಹೋಗಲಿಲ್ಲ. ಈಗಾಗಲೇ ಹಡಗಿನ ಹಿಂಬದಿಯಲ್ಲಿ ಲಂಗರನ್ನು ಹಾಕಿದ್ದರಿಂದ, ಮುಂಭಾಗದಲ್ಲಿ ಪುನಃ ಲಂಗರನ್ನು ಹಾಕುವ ಅಗತ್ಯವಿರಲಿಲ್ಲ, ಅದು ಹಡಗಿಗೆ ಹೆಚ್ಚಿನ ಅಪಾಯವನ್ನು ಉಂಟುಮಾಡುವ ಸಾಧ್ಯತೆಯಿತು. "ನಾವಿಕರು ತಪ್ಪಿಸಿಕೊಳ್ಳಲು ಯತ್ನಿಸುತ್ತಿರುವಾಗ, ... ಪೌಲನು ಶತಾಧಿಪತಿಗೂ, ಸಿಪಾಯಿಗಳಿಗೂ - ಇವರು ಹಡಗಿನಲ್ಲಿ ನಿಲ್ಲದೆ ಹೋದರೆ ನೀವು ಉಳಿದುಕೊಳ್ಳುವದಕ್ಕಾಗುವದಿಲ್ಲವೆಂದು[10] ಹೇಳಿದನು" (ವಚನಗಳು 30, 31). "ಆಗ ಸಿಪಾಯಿಗಳು ದೋಣಿಯ ಹಗ್ಗಗಳನ್ನು ಕತ್ತರಿಸಿ ಅದು ಬಿದ್ದು ಹೋಗುವಂತೆ ಮಾಡಿದರು" (ವಚನ 32), ಮುಂದಾಗ ಬಹುದಾದ ಅನಾಹುತವನ್ನು ಪರಿಣಾಮಕಾರಿಯಾಗಿ ನಿಲ್ಲಿಸಿದರು.[11]

ರಾತ್ರಿಯಾಗುತ್ತಾ, ಹಡಗಿನಲ್ಲಿದ್ದವರ ನಿರೀಕ್ಷೆಯು ಕ್ಷೀಣಿಸುತ್ತಾ ಬಂದಿತ್ತು; ಅನುಭವಿಗಳಾದ ನಾವೀಕರಿಗೆ ಭಯವಾಗಿರುವಾಗ ಇತರರು ಅಂಜಿರಲಿಲ್ಲವೇ? ಬೆಳಗಾಗುವದರೊಳಗಾಗಿ ಪುನಃ ಪೌಲನು ಅವರ ಉತ್ತೇಜನಕ್ಕಾಗಿ ಮೂರು ಅಂಶಗಳನ್ನು ಅವರ ಮುಂದಿಟ್ಟನು:

ಮೊದಲನೆಯದಾಗಿ, ಅವರನ್ನು ದೈಹೀಕವಾಗಿ ಭಲಪಡಿಸಬೇಕಿತ್ತು - ದೇಹಕ್ಕೆ ತೊಂದರೆಯಾದರೇ, ಆತ್ಮವೂ ಕುಂದುತ್ತದೆ:[12] ಎಲ್ಲರೂ ಊಟ ಮಾಡಬೇಕೆಂದು ಪ್ರೋತ್ಸಾ ಹಿಸಿ, "ನೀವು ಈ ಹೊತ್ತಿಗೆ ಹದಿನಾಲ್ಕು ದಿವಸದಿಂದ ಕಾದುಕೊಂಡು ಆಹಾರವೇನು[13] ತೆಗೆದು ಕೊಳ್ಳದೆ ಉಪವಾಸವಾಗಯೇ ಇದ್ದೀರಾದ್ದರಿಂದ ಆಹಾರ ತೆಗೆದು ಕೊಳ್ಳಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ ಅಂದನು" (ವಚನಗಳು 33ಬಿ, 34ಎ). ಇನ್ನೊಂದು ಅರ್ಥದಲ್ಲಿ, "ನೀವು ಬದುಕುಳಿಯುವದಕ್ಕೆ ನಿಮಗೆ ಬಲದ ಅವಶ್ಯವಿದೆ ಎಂಬುದೆ."

ಎರಡನೆಯದಾಗಿ, ನಿಮ್ಮ ಆತ್ಮಗಳನ್ನು ಬಲಗೊಳಿಸಿರಿ - ಆತ್ಮಕ್ಕೆ ಕುಂದಾದರೆ ದೇಹವೂ ಬಳಲುತ್ತದೆ: ಅವನು ಅವರಿಗೆ ಪುನಃ ದೇವರ ವಾಗ್ದಾನವನ್ನು ನೆನಪು ಮಾಡಿ, "ನಿಮ್ಮಲ್ಲಿ ಯಾರ ತಲೆಯಿಂದಾದರೂ ಒಂದು ಕೂದಲೂ ಉದುರಿ ಹೋಗುವದಿಲ್ಲವೆಂದು"[14] ಹೇಳಿದನು (ವಚನ 34ಬಿ).

ಪ್ರಾಯಶಃ ಮೂರನೆ ಹಾಗೂ ಪ್ರಮುಖವಾದ ಅಂಶವೇನೆಂದರೆ: ಅವನು ವಾಗ್ದನವನ್ನು ನಂಬಿದ್ದನು ಎಂದು ಸಾಭೀತು ಪಡಿಸಿದನು; ದೇವರು ಅವನ ಸಂಗಡ ಇದ್ದನು ಎಂದು

ಪ್ರದರ್ಶಿಸಿದನು. "ಅವನು ರೊಟ್ಟಿಯನ್ನು ತೆಗೆದುಕೊಂಡು ಎಲ್ಲರ ಮುಂದೆ ದೇವರ ಸ್ತೋತ್ರ ಮಾಡಿ ಅದನ್ನು ಮುರಿದು ತಿನ್ನುವದಕ್ಕೆ ಪ್ರಾರಂಭಿಸಿದನು" (ವಚನ 35)[15] ನಾವಿಕರೆಲ್ಲರೂ ಭಯಗೊಂಡಿದ್ದು ಪೌಲನ ಸಮಾಧಾನವು ಎಲ್ಲರನ್ನು ಆವರಿಸಿತ್ತು: "ಆಗ ಎಲ್ಲರೂ ಧೈರ್ಯ ತಂದುಕೊಂಡು ತಾವು ಆಹಾರವನ್ನು ತೆಗೆದುಕೊಂಡರು" (ವಚನ 36). ಎಂಥಾ ಒಂದು ದೃಷ್ಯಾ ಅದಾಗಿತ್ತು. 273 ಜನರಲ್ಲಿ ಮೂರು ಜನ ಕ್ರೈಸ್ತರಿಗೆ ನೀಡಿದ ಆಹಾರಕ್ಕಾಗಿ ಒಬ್ಬ ಚಿಕ್ಕದೇವ ದಾಸನು ದೇವಸ್ತೋತ್ರಮಾಡಿದ ದೃಷ್ಯಾವಾಗಿತ್ತಲ್ಲವೇ![16] ಈ ರೀತಿಯಾಗಿ ಅವನು ಅವರ ಆತ್ಮಗಳನ್ನು ಬಲಪಡಿಸಿದನು - ಆತ್ಮಕ್ಕೆ ಕುಂದು ತರುವಂಥದ್ದು ದೇಹ ಹಾಗೂ ಪ್ರಾಣದ ಮೇಲೆ ಪರಿಣಾಮ ಬೀರುತ್ತದೆ.

ನಾವು ಸುಳಿಗಾಳಿಯನ್ನು ಎದುರಿಸುವಾಗ, ಪೌಲನಂತೆ ನಮ್ಮ ಜೀವಿತಗಳಲ್ಲಿ ದೇವ ಸಾನಿಧ್ಯವನ್ನು ಪ್ರದರ್ಶಿಸಬಹುದು.[17] ನಾವುಗಳು ದೇವರ ವಾಗ್ದಾನಗಳನ್ನು ನಂಬುವವರೆಂದು ಇತರರು ಅರಿತುಕೊಳ್ಳಬೇಕು - ಏನೇ ಸಂಭವಿಸಿದರೂ, ನಾವು ಕೈ ಬಿಡಲ್ಪಟ್ಟವರಲ್ಲ ಎಂದು ಸಾಭೀತು ಪಡಿಸಬೇಕು. "ನಾವೆಲ್ಲರೂ ಪೌಲನೊಂದಿಗೆ ಇಕ್ಕಟ್ಟು ಪರಿಸ್ಥಿತಿಯಲ್ಲಿದ್ದರೂ ಇದ್ದರೂ, ಅತಿಸಂಕಟ ಪಡುವವರಲ್ಲ; ನಾವು ದಿಕ್ಕುಕಾಣದವರಾದರೂ ಕೇವಲ ದೆಸೆಗೆಟ್ಟವರಲ್ಲ; ಕೆಡವಲ್ಪಟ್ಟಿದ್ದರೂ ಪ್ರಾಣನಷ್ಟಪಡುವವರಲ್ಲ" (2 ಕೊರಿಂಥ 4:8, 9) ಎಂದು ಹೇಳಬಹುದು.

## ಯೋಜನೆಯನ್ನು ತ್ವರೆಪಡಿಸಬೇಕು (27:38-44)

ಬಿರುಗಾಳಿಯ ಸಮಯದಲ್ಲಿ ಪೌಲನಲ್ಲಿದ್ದ ವರ್ತನೆಯ ಕುರಿತು ನಾನು ಆಲೋಚಿಸುವಾಗ, ಅವನಲ್ಲಿದ ಕಾರ್ಯ ಕ್ಷಮೆತೆಯನ್ನು ನೋಡುತ್ತೇವೆ. ಹಡಗಿನಲ್ಲಿರುವವರೆಲ್ಲರೂ ನಾಶವಾದರು ಎಂದು ದೇವರು ವಾಗ್ದಾನ ಮಾಡಿದ್ದರೂ, ಪೌಲನು ತಾನು ಮಾಡಬೇಕಾದ ಕಾರ್ಯವನ್ನು ಮಾಡಬಾರದೆಂದು ನಂಬಿರಲಿಲ್ಲ: ಹಡಗಿನಲ್ಲಿದ್ದವರೆಲ್ಲರೂ ಬೇಸರಗೊಂಡಿರುವಾಗ ಅವರನ್ನು ಉತ್ತೇಜನ ಮಾಡಿದನು, ಅವರೆಲ್ಲರು ಊಟಮಾಡಬೇಕೆಂದು ಮನವಿ ಮಾಡಿದನು. ನಾವುಗಳು ಬಿರುಗಾಳಿಯಲ್ಲಿ ಸಿಲುಕಿರುವಾಗ, ನಾವುಗಳು ದೇವರ ಯೋಜನೆಯನ್ನು ಕಾರ್ಯಗತ ಮಾಡಲು ತ್ವರೆಮಾಡಬೇಕು - ಅದು ಯಾವುದೇ ಆಗಿದ್ದರೂ ಅದನ್ನು ಮಾಡಬೇಕು. ಬಿರುಗಾಳಿಯಲ್ಲಿ ಬದುಕುಳಿಯುವಂಥ ಕಾರ್ಯಗಳನ್ನು ಮಾಡಬೇಕು.

ಪ್ರಯಾಣಿಕರೆಲ್ಲರು ಊಟ ಮಾಡಿದ ಬಳಿಕ, ಅವರು ಬಲಗೊಂಡು ನಿರೀಕ್ಷೆವುಳ್ಳವರಾದರು. ಅವರು ಮುಂಜಾನೆಗಾಗಿ ಹಾರೈಸುತ್ತಿದ್ದರು. "ಸಾಕಾದಷ್ಟು ತಿಂದ ಮೇಲೆ ಗೋದಿಯನ್ನು ಸಮುದ್ರಕ್ಕೆ ಚೆಲ್ಲಿ ಹಡಗನ್ನು ಹಗುರ ಮಾಡಿದರು" (ವಚನ 38). ಮತ್ತು ಅಲ್ಲಿದ್ದ ಇತರೆ ಸರಂಜಾಮುಗಳನ್ನು ಸಮುದ್ರಕ್ಕೆ ಎಸೆದರು (ನೋಡಿರಿ ವಚನ 18), ಇದರಿಂದ ಹಡಗು ಹಗುರಗೊಂಡು ಸಮುದ್ರ ತೀರಕ್ಕೆ ಸಮೀಪವಾಗುವ ಸಾಧ್ಯತೆಯಿತ್ತು.

ಮುಂದಿನ ವಚನದಲ್ಲಿ, "ಬೆಳಗಾದ ಮೇಲೆ ..." (ವಚನ 39ಎ). ಕೆಟ್ಟ ರಾತ್ರಿಯು ಹೊರಟು ಹೋಗಿರುತ್ತದೆ. "ಬೆಳಗಾದ ಮೇಲೆ ಆ ದೇಶದ ಗುರುತನ್ನು ತಿಳಿಯದೆ ಉಸುಬಿನ ದಡವುಳ್ಳ ಒಂದು ಕೊಲ್ಲಿಯನ್ನು ನೋಡಿ[18] ಆ ದಡದ ಮೇಲೆ ಹಡಗನ್ನು ನೂಕುವದಕ್ಕೆ ಸಾಧ್ಯವಾದೀತೆಂದು ಯೋಚಿಸಿದರು" (ವಚನ 39). ಆ ದೇಶವು ಕಾಣುತ್ತಿದ್ದರೂ, ಅವರು ಸುರಕ್ಷೆಯಿಂದ ಇನ್ನು ದೂರ ಉಳಿದಿದ್ದರು.

ಅವರು ಈ ಸಿದ್ಧತೆಯಲ್ಲಿ ಮುಂದುವರಿಯುವಾಗ, ಪ್ರಯಾಣಿಕರೆಲ್ಲರು ಮೂರು ಸಂಗತಿಗಳನ್ನು ಮಾಡಿದರು: (1) ಅವರು "ಲಂಗರುಗಳನ್ನು ಸರಿದು ಸಮುದ್ರದಲ್ಲಿ ಬಿಟ್ಟರು" ಯಾಕೆಂದರೆ ಅವರಿಗೆ ಅದರ ಅಗತ್ಯತೆಯಿರಲಿಲ್ಲ (ವಚನ 40ಎ). (2) "ಅದೇ ಸಮಯದಲ್ಲಿ ಚುಕ್ಕಾಣಿಗಳ ಕಟ್ಟನ್ನು ಬಿಚ್ಚಿ ದೊಡ್ಡ ಹಾಯಿಯನ್ನು ಗಾಳಿಗೆ ಎತ್ತಕಟ್ಟಿ ಹಡಗನ್ನು ಅದಡಕ್ಕೆ ನಡಿಸುತ್ತಿದ್ದರು" (ವಚನ 40ಬಿ). ಪುರಾತನ ಕಾಲದ ಹಡಗುಗಳು ಎರೆಡೆರದು ಚುಕ್ಕಾಣಿಗಳನ್ನು

ಹೊಂದಿರುತ್ತಿದ್ದವು. ಅವುಗಳನ್ನು ಹಡಗಿನ ಎರಡು ಮೂಲೆಗಳಲ್ಲಿ ಅಳವಡಿಸಿಬಿಟ್ಟಿರುತ್ತಿದ್ದರು. ಅವೆರಡನ್ನು ಒಂದೇ ಮರದ ತುಂಡಿಗೆ ಜೊಡಿಸಿದ್ದರಿಂದ, ಒಬ್ಬನೇ ಅದನ್ನು ತಿರುಗಿಸಬಹುದಿತ್ತು. (3) "ಅವರು ಹಾಯಿಯನ್ನು ಎತ್ತಿ ಕಟ್ಟಿದ್ದರು" (ವಚನ 40ಸಿ). ಇದರಿಂದ ಅವರಿಗೆ ತಾತ್ಕಾಲಿಕ ಸಂರಕ್ಷಣೆಯಾಗುತ್ತಿತ್ತು.[19]

ಅವರುಗಳು ಸಿದ್ಧರಾಗಿ ದಡಕ್ಕೆ ನಡಿಸುತ್ತಿದ್ದರು (ವಚನ 40ಡಿ). ಅವರು ದಡಕ್ಕೆ ಹತ್ತಿರವಾಗಿ ಸಾಗಬೇಕೆಂದು ಪ್ರಯತ್ನಿಸುತ್ತಿರುವಾಗ, ಮಧ್ಯದಲ್ಲಿ ಅವರಿಗೆ ಮರಳ ದಿಬ್ಬಣ ಸಿಕ್ಕಿದಾಗ [ಮರಳು ಹಾಗು ಬಂಡೆಗಳು ಮಿಶ್ರವಾಗಿದ್ದ ದಿಬ್ಬ] ಅದ ಎರಡು ಸಮುದ್ರಗಳು ಒಟ್ಟುಗೂಡುವ [ಅಡ್ಡ ಪ್ರವಾಹ][20] ಸ್ಥಳವಾಗಿತ್ತು, "ಅವರು ಹಡಗನ್ನು ಅದಕ್ಕೆ ಹತ್ತಿಸಿ" (ವಚನ 41ಎ). "ಹಡಗಿನ ಮುಂಭಾಗವು ತಗಲಿಕೊಂಡು ಅಲ್ಲಾಡದೆ ನಿಂತಿತು. ಹಿಂಭಾಗ ತೆರೆಗಳ ಹೊಡೆತದಿಂದ ಒಡೆದುಹೋಗುತ್ತಾ ಬಂತು" (ವಚನ 41ಬಿ).

ಹಡಗು ಭಾಗಭಾಗವಾಗಿ ಮುರಿಯಲ್ಪಡುವಾಗ, ಅವರ ಹೃದಯಗಳಲ್ಲಿ ಭಯ ಹಿಡಿದವರಾದರು. ಈ ಸಮಯದಲ್ಲಿ ನಾವಿಕರ ಬದಲು ಸೈನಿಕರು ಭಯಗ್ರಾಂತರಾದರು. ಯಾಕೆಂದರೆ, ಖೈದಿಗಳಲ್ಲಿ ಒಬ್ಬನು ತಪ್ಪಿಸಿಕೊಂಡರೆ, ಅದರ ಉಸ್ತುವಾರಿ ಹೊಂದಿರುವವನು, ಆ ಖೈದಿಯ ಶಿಕ್ಷೆಯನ್ನು[21] ಅನುಭಿಸಬೇಕಿತ್ತು ಎಂಬ ನಿಯಮವಿತ್ತು. "ಕೆಲವು ಖೈದಿಗಳು ತಪ್ಪಿಸಿಕೊಳ್ಳುವ ಸಾಧ್ಯತೆ ಇದ್ದದರಿಂದ,[22] ಯಾವ ಸಿಪಾಯಿಗಳು ಅವರನ್ನು ಕೊಲ್ಲಬೇಕೆಂಬದಾಗಿ ಆಲೋಚನೆ ಹೇಳಿದರು" (ವಚನ 42). ಸಿಪಾಯಿಗಳು, ಖೈದಿಗಳೊಂದಿಗೆ ಪೌಲನನ್ನು ಕೊಂದುಹಾಕಲು ಯೋಜನೆ ಮಾಡಿದ್ದರು.

ಸಿಪಾಯಿಗಳು ಪೌಲನನ್ನು ಕೊಲ್ಲಬೇಕೆಂದಿರುವಾಗ, ಅವನ ಜೀವಿತವು ತಿರುಗಿ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿತು - ಆದರೆ ದೇವರು ಪೌಲನಿಗೆ ಕೈಸರನ ಮುಂದೆ ನಿಂತುಕೊಳ್ಳಬೇಕೆಂದು ವಾಗ್ವಾನ ಮಾಡಿದ್ದನು. ಈಗ ದೇವರು ಶತಾಧಿತಿಯಾದ ಯೂಲ್ಯನ ಮೂಲಕ ತನ್ನ ಕಾರ್ಯವನ್ನು ಮಾಡಿದನು. ಪೌಲನಿಗೆ ಶತಾಧಿಪತಿಯು ವಿಶೇಷವಾದ ಸಂರಕ್ಷಣೆಯನ್ನು ನೀಡಬೇಕೆಂಬ ಅಪ್ಪಣೆಯನ್ನು ಹೊಂದಿದ್ದನು, ಹಾಗೂ ಈ ಕ್ಲಿಷ್ಟ ಪರಿಸ್ಥಿತಿಯಲ್ಲಿ ಪೌಲನ ವರ್ತನೆಯನ್ನು ಸಹ ಗಮನಿಸಿದ್ದನು. ಆದ್ದರಿಂದ, "ಶತಾಧಿಪತಿಯು ಪೌಲನನ್ನು ಉಳಿಸಬೇಕೆಂದು ಅಪೇಕ್ಷಿಸಿದ್ದನು,[23] ಮತ್ತು ಅವರ ಆಲೋಚನೆಯನ್ನು ಬೇಡ ವೆಂದಿದ್ದನು"[24] (ವಚನ 43ಎ). (ನಿಮ್ಮ ಕಷ್ಟದ ಸಮಯದಲ್ಲಿಯೂ, ದೇವರು ಬೇರೊಬ್ಬರ ಮೂಲಕ ಸಹಾಯವನ್ನು ನೀಡುವನು.)

ಆ ಶತಾಧಿಪತಿಯು ಅಪ್ಪಣೆಯನ್ನು ನೀಡಿ, "ಈಜು ಬಲ್ಲವರು ಹಡಗಿನಿಂದ ದುಮುಕಿ ಮೊದಲಾಗಿ[25] ತೀರಕ್ಕೆ ಹೋಗಬೇಕೆಂದು, ಮಿಕ್ಕಾದವರಲ್ಲಿ ಕೆಲವರು ಹಲಿಗೆಗಳ ಮೇಲೆ ಕೆಲವರು ಹಡಗಿನ[26] ತುಂಡುಗಳ ಮೇಲೆ ಹೋಗಬೇಕೆಂತಲೂ ಅಪ್ಪಣೆ ಕೊಟ್ಟನು" (ವಚನಗಳು 43ಬಿ, 44ಎ).

ಪೌಲನು ವಿರೋಧ ವ್ಯಕ್ತಪಡಿಸಿ, "ಒಂದು ನಿಮಿಷ ತಡೆಯಿರಿ! ನಾನು ಆ ತಣ್ಣಗಿರುವ ಹಾಗೂ ಕೆರೆಗಳಿರುವ ನೀರಿಗೆ ಹಾರುವದನ್ನು ನೀವು ಬಯಸುವಿರಾ? ಕರ್ತನು ನಾನು ಸುರಕ್ಷಿತವಾಗಿದ್ದು, ಮನೆಯನ್ನು ಸೇರಿಕೊಳ್ಳುವೆನು ಎಂಬ ವಾಗ್ದಾನವನ್ನು ಮಾಡಿರುವದರಿಂದ, ಕರ್ತನು ಬಂದು ನನಗೆ ಸಹಾಯಿಸುವವರೆಗೆ ಇಲ್ಲಿರುವೆನು" ಎಂದು ಹೇಳಿದನೇ? ನೀರಿನಲ್ಲಿ ದುಮುಕಿದವರಲ್ಲಿ ಪೌಲನು ಮೊದಲಿಗನಾಗಿದ್ದನು ಎಂದು ನಾನು ಭಾವಿಸುತ್ತೇನೆ! ಅವನು ಅಲೆಗಳಿಗೆ ವಿರುದ್ಧವಾಗಿ ಅಥವಾ ಹಡಗಿನ ಒಂದು ತುಂಡನ್ನು ಹಿಡಿದು ನೀರಿನಲ್ಲಿ ಮುನ್ನುಗ್ಗುತಿರಬಹುದು. ನಂತರ ತನ್ನ ತಲೆಯನ್ನು ನೀರಿನ ಮೇಲೆ ಹಿಡಿದಿಡಲು ಕಷ್ಟಪಡುತ್ತಾ, ಉಪ್ಪಿನ ನೀರಿನ ನಿಮಿತ್ತ ಪ್ರಯಾಸಪಡುತ್ತಾ ಸಮುದ್ರ ದಂಡೆಯನ್ನು ಸೇರಿರಬಹುದು.

ನಾವೆಲ್ಲರು ತಿಳಿಯಬೇಕಾದ ವಿಚಾರವನ್ನೇ ಪೌಲನು ಅರಿತ್ತಿದ್ದನು: ಜೀವನದ ಬಿರುಗಾಳಿಯ ಸಮಯದಲ್ಲಿ ಜಯದ ವಾಗ್ದಾನವನ್ನು ದೇವರು ನೀಡಿದರೂ, ನಾವು

ಮುನ್ನುಗ್ಗುವ ಪ್ರಯತ್ನವನ್ನು ಮಾಡಲೇಬೇಕು. ನಮ್ಮ ಜೀವಿತಕ್ಕಾಗಿ ದೇವರು ಒಂದು ಯೋಜನೆಯನ್ನು ಹೊಂದಿರುವನು. ಅದನ್ನು ಸಾಧಿಸಲು ಆತನೇ ಸಹಾಯಿಸುವನು. ಆದರೆ ನಾವು ಮಾಡಲೇಬೇಕಾದ ಕಾರ್ಯವನ್ನು ಆತನು ಮಾಡಲಾರನು. ನಾವು ತಣ್ಣನೆಯ ನೀರಿನಲ್ಲಿ ದುಮುಕಿ ಈಜಬೇಕೆಂಬ ಯೋಜನೆಯು ಕರ್ತನದಾಗಿದ್ದರೆ, "ಕರ್ತನೇ ನಾನು ಈಜಲಾರೆ" ಎಂಬ ಪ್ರತಿಕ್ರಿಯೆಯನ್ನು ಆತನು ಒಪ್ಪಿಕೊಳ್ಳಲಾರನು! ಜೀವನವನ್ನು ಕಾಪಾಡುವ ನಂಬಿಕೆಯನ್ನು ಹೊಂದಿದವರಾಗಿ ನೀರಿಗೆ ದುಮುಕ ಬೇಕು! ಜೀವಿತದ ಬಿರುಗಾಳಿಯಿಂದ ಪಾರಾಗಬೇಕಾಗಿದ್ದರೆ, ಆತನ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು!

## ಸಮಾಧಾನದ ಅನಭವವನ್ನು ಹೊಂದಿರಿ (27:44-28:2)

ನಮ್ಮ ಜೀವಿತಕ್ಕಾಗಿ, ನಮ್ಮ ಚಿತ್ತವನ್ನು ದೇವರಿಗೆ ಸಮರ್ಪಿಸಿದರೆ, ನಂತರ ಆತನು ನೀಡುವ ಸಮಾಧಾನದ ಅನುಭವವನ್ನು ಹೊಂದಬಹುದು. "ನಾವೆಲ್ಲರು ನೀರಿಗೆ ದುಮುಕಿ ಕ್ಷೇಮವಾಗಿ ತೀರವನ್ನು ಸೇರುವಾಗ, ಈ ರೀತಿಯಿಂದ ಎಲ್ಲರೂ ಸುರಕ್ಷಿತ ವಾಗಿ ತೀರಕ್ಕೆ ಸೇರಿದರು" (27:44ಬಿ). ಕಡೇಯ ವ್ಯಕ್ತಿಯ ತೀರಕ್ಕೆ ಸೇರಲು, ಅವರು ಎಲ್ಲರನ್ನು ಲೆಕ್ಕಮಾಡಲು ಅಲ್ಲಿ ಸರಿಯಾಗಿ 276 - ಜನರು ಇದ್ದರು (ವಚನ 37) - ಅವರೆಲ್ಲರೂ *ಜೀವದಿಂದಿದ್ದರು* ವಾಕ್ಯದ ಪ್ರಕಾರ ತಿಳಿದ ಹಾಗೆ (ವಚನಗಳು 22, 34; ಒತ್ತಿ ಹೇಳಿದ್ದು ನನ್ನದು)! ಯಾರೂ ಮರಣವನ್ನು ಹೊಂದಲಿಲ್ಲ ಹಾಗೂ ಅವರ ತಲೆ ಕೂದಲಲ್ಲಿ ಒಂದೂ ಸಹ ನಾಶವಾಗಲಿಲ್ಲ. ಆಕಸ್ಮಿಕವು ಇದನ್ನು ವಿವರಿಸಲಾರದು; ಅಂಕಿ ಸಂಖ್ಯೆ ಶಾಸ್ತ್ರದ ಪ್ರಕಾರ ಇದು ಅಸಾಧ್ಯವೇ. ಹೇಗಿದ್ದರೂ ಇದು ಸತ್ಯಾಂಶವೇ ಆಗಿತ್ತು. ದೇವರು ವಾಗ್ದಾನ ಮಾಡುವಾಗ, ನೀವು ಅದನ್ನು ಅವಲಂಭಿಸಬಹುದು (1 ಅರಸುಗಳು 8:56 ನೋಡಿ). ಅದು ನಿಮಗೆ ಶಾಂತಿ ನೀಡದಿದ್ದರೆ, ಬೇರೆ ಯಾವ ಸಂಗತಿಗಳೂ ಇದನ್ನು ನೀಡಲಾರದು!

ಹಡಗಿನ ಅಪಘಾತದಿಂದ ಬದುಕುಳಿದವರು, ಸುತ್ತಲೂ ನೋಡುವಾಗ, ಅವರು ಇತಾಲ್ಯವನ್ನು ಸೇರಿರಲಿಲ್ಲ: "ನಾನು ದಡಕ್ಕೆ ಸೇರಿದ ಮೇಲೆ ಆ ದ್ವೀಪದ ಹೆಸರು ಮೆಲೀತೆ ಎಂದು ನಮಗೆ ತಿಳಿದು ಬಂತು" (28:1). ದೇವರು ಅವರನ್ನು ನೋಡುತ್ತಾ ಇದದ್ದರಿಂದ, ಲೂಕನು ಈ ವಿಚಾರವನ್ನು ದಾಖಲು ಮಾಡಿರುವನು: "ಅನ್ಯಭಾಷೆಯವರಾದ ಆ ದ್ವೀಪದವರು ನಮಗೆ ಮಾಡಿದ ಉಪಕಾರವು ಅಷ್ಟಿಷ್ಟಲ್ಲ" (ವಚನ 2ಎ). ಒಬ್ಬ ಕ್ರೈಸ್ತನು ತನ್ನ ನಾಳಿನ ದಿನದ ಪ್ರಯಾಣವು ಹೇಗಿರುತ್ತದೆಂದು ಅರಿಯದೆ ಇರಬಹುದು, "ಆದರೆ ಅವನೊಂದಿಗೆ ಪ್ರಯಾಣ ಮಾಡುವವನನ್ನು ಅವನು ಅರಿತಿರುವನು. ಆದರೆ ಸಕಲ ಸನ್ನಿವೇಶದಲ್ಲೂ ಪೌಲನು ಸಮಾಧಾನವನ್ನು ಹೊಂದಿದ್ದನು."[27]

## ಮುಕ್ತಾಯ

ಒಂದು ವೇಳೆ ಈಗಲೂ ನಿಮ್ಮ ಜೀವಿತದಲ್ಲಿ ನೀವುಗಳು ಬಿರುಗಾಳಿಯಲ್ಲಿ ಸಿಲುಕಿಕೊಂಡಿದ್ದರೆ, ಈ ಕೆಳಕಂಡ ಕೀರ್ತನೆಗಾರನ ಮಾತುಗಳನ್ನು ನಿಮ್ಮ ಸೂತ್ರವನ್ನಾಗಿ ಮಾಡಿಕೊಳ್ಳಬಹುದು: "ನನ್ನ ಮನವೇ, ನೀನು ಕುಗ್ಗಿ ಹೋಗಿರುವದೇನು? ಹೀಗೆ ವ್ಯಥೆಪಡುವದೇಕೆ?" (ಕೀರ್ತನೆ 42:5ಎ); "ದೇವರನ್ನು ನಿರೀಕ್ಷಿಸು; ಆತನೇ ನನಗೆ ರಕ್ಷಕನೂ ದೇವರ ಆಗಿದ್ದಾನೆ" (ಕೀರ್ತನೆ 43:5ಬಿ).

ಬಿರುಗಾಳಿಯಲ್ಲಿ ಕ್ಷೇಮವಾಗಿರುವ ಕುರಿತು ಈ ಪಾಠದಲ್ಲಿ ಅನೇಕ ಸಲಹೆಗಳನ್ನು ನಾನು ನೀಡಿರುವೆನು: (1) ಬಿರುಗಾಳಿಯು ಬರುವದೆಂದು ನಿರೀಕ್ಷಿಸಿರಿ - ಅದು ಬರುವಾಗ ನಿಮಗೆ ಆಶ್ಚರ್ಯವಾಗುವದಿಲ್ಲ. (2) ದೇವರ ವಾಗ್ದಾನಗಳನ್ನು ಉಚ್ಚರಿಸಿರಿ - ಅದರಿಂದ ನೀವು ಸಿದ್ಧರಾಗದೇ ಇರುವಾಗ, ಅದು ನಿಮ್ಮನ್ನು ಮೀರಿಸಿ ಹೋಗಲಾರದು. (3) ದೇವರ ಸಾನಿಧ್ಯವನ್ನು ಪ್ರದರ್ಶಿಸಿರಿ - ಬಿರುಗಾಳಿಯ ಸಮಯದಲ್ಲಿ ಸುರಕ್ಷಿತರಾಗಿರುವಿರಿ. (4) ದೇವರ

ಯೋಜನೆಗಳನ್ನು ಕಾರ್ಯರೂಪಕ್ಕೆ ತನ್ನಿರಿ - ಇದರಿಂದ ನೀವು ಅವಿಧೇಯರು ಎಂದು ಕಾಣಲು ಅಸಾಧ್ಯವಾಗುತ್ತದೆ. (5) ದೇವರ ಸಮಾಧಾನವನ್ನು ಅನುಭವಿಸಿರಿ - ಬಿರುಗಾಳಿಯ ಸಮಯದಲ್ಲಿ ಫಲವನ್ನು ಹೊಂದಲಾರದೆ ಇರುವಿರಿ.

ದೇವರೊಂದಿಗಿನ ನಂಬಿಕೆಯನ್ನು ಕಾಪಾಡುವದೇ ನಿಮ್ಮ ರಹಸ್ಯವಾಗಿರುತ್ತದೆ. ಪೌಲನು ತೋರಿದಂಥ ನಂಬಿಕೆ:

> ನಾನು ಯಾರವನಾಗಿದ್ದೇನೋ ಯಾರನ್ನು ಸೇವಿಸುತ್ತೇನೋ ಆ ದೇವರಿಂದ ಬಂದ ಒಬ್ಬ ದೂತನು ಕಳೆದ ರಾತ್ರಿಯಲ್ಲಿ ನನ್ನ ಹತ್ತಿರ ನಿಂತು - ಪೌಲನೇ, ಭಯಪಡಬೇಡ, ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು; ಇದಲ್ಲದೆ ನಿನ್ನ ಸಂಗಡ ಈ ಹಡಗಿನಲ್ಲಿ ಪ್ರಯಾಣಮಾಡುವರೆಲ್ಲರ ಪ್ರಾಣ ದೇವರು ನಿನ್ನ ಮೇಲಣ ದಯೆಯಿಂದ ಉಳಿಸಿಕೊಟ್ಟಿದ್ದಾನೆಂದು ನನ್ನ ಸಂಗಡ ಹೇಳಿದನು. ಆದದರಿಂದ ಜನರೇ ಧೈರ್ಯವಾಗಿರ್ರಿ. ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದೆಂದು ದೇವರನ್ನು ನಂಬುತ್ತೇನೆ. ಆದರೆ ನಾವು ಯಾವದೋ ಒಂದು ದ್ವೀಪದ ದಡವನ್ನು ತಾಕಬೇಕಾಗಿದೆ ಎಂದು ಹೇಳಿದನು (27:23-25).

ಪೌಲನಿಗೆ ಹೇಳಲ್ಪಟ್ಟ ಸಂಗತಿಗಳು ನೆರವೇರಿದವೇ? ಬೆಂಕಿಯ ಮುಂದೆ ಚಳಿಕಾಯಿಸಿಕೊಳ್ಳುತ್ತಿದ್ದ 276 ಜನರು, ದೇವರು ತನ್ನ ವಾಗ್ದಾನವನ್ನು ನೆರವೇರಿಸುವವನು ಎಂದು ಮಾತನಾಡಿಕೊಳ್ಳುತ್ತಿರಲಿಲ್ಲವೇ! ಅವರು ಬಿರುಗಾಳಿಯಿಂದ ಸುರಕ್ಷಿತರಾದಂತೆ, ನೀವು ಸಹ ಸುರಕ್ಷಿತರೇ! ಈ ಮಾತುಗಳನ್ನು ನಿಮ್ಮ ಹೃದಯಗಳಲ್ಲಿ ಬರೆಯಿರಿ: "ನನಗೆ ದೇವರು ಮಾಡಿದ ವಾಗ್ದಾನಗಳಂತೆ, ಎಲ್ಲವೂ ನೆರವೇರಿದೆ. ಎಂಬುದನ್ನು ನಾನು ನಂಬುತ್ತೇವೆ" ಈ ವಿಧದ ನಂಬಿಕೆಯ ಮೂಲಕ ಯಾವುದೇ ಬಿರುಗಾಳಿಯನ್ನು ಎದುರಿಸಲು ಸಾಧ್ಯವಿದೆ![28]

## ದೃಷ್ಯ ಸಂಬಂಧವಾದ – ಟಿಪ್ಪಣಿ

ದೇವರ ಕೃಪೆ ಹಾಗೂ ಮನುಷ್ಯನ ಹೊಣೆಯ ಕುರಿತ ಪಾಠವು ಇದಾಗಿರುತ್ತದೆ: ಹಡಗಿನಲ್ಲಿರುವವರೆಲ್ಲರನ್ನು ದೇವರು ಪೌಲನಿಗೆ ವಹಿಸಿಕೊಟ್ಟನು. ಆದಾಗ್ಯೂ, ಅವರೆಲ್ಲರೂ ತೀರವನ್ನು ಸೇರುವಂತೆ ಮಾಡಬೇಕಾದ ಕಾರ್ಯಗಳನ್ನು ಪೌಲನು ಮಾಡಲೇಬೇಕಾಯಿತು. ವೈಯಕ್ತಿಕವಾದ ಬ್ಯಾಂಕಿನ ಚೆಕ್‌ಗಳನ್ನು ಬಳಸುವಂಥ ಪ್ರದೇಶಗಳಲ್ಲಿ ನೀವುಗಳು ಇರುವದಾದರೆ, ಒಂದು ಖಾಲಿಯಾದ ಚೆಕ್ಕನ್ನು ನಿಮ್ಮ ಪಾಠದಲ್ಲಿ ಬಳಸಿರಿ. ನಿಮ್ಮ ಕೇಳುಗನ ಹೆಸರಿನಲ್ಲಿ ಬೇಕಾದಷ್ಟು ಹಣವನ್ನು ಅದರಲ್ಲಿ ದಾಖಲು ಮಾಡಿದೆ ಎಂದು ಹೇಳಿರಿ (ಅದನ್ನು ಅವನು ಸಂಪಾದಿಸಿರುವದಿಲ್ಲ) ಹಾಗು ಅವನು ಚೆಕ್ಕನ್ನು ಪಡೆದು, ಅದರಿಂದ ಹಣವನ್ನು ಪಡೆಯುವನು ಅದೇ ರೀತಿಯಲ್ಲಿ ರಕ್ಷಣೆಯ ಒಂದು ಬಹುಮಾನವಾಗಿದೆ, ದೇವರಿಗೆ ವಿಧೇಯರಾದರೆ ಅದರಿಂದ ಬಹುಮಾನವಾದ ವರವನ್ನು ಪಡೆಯಬಹುದು (ನಾವು ಮಾಡಬೇಕಾದದ್ದನ್ನು ಮಾಡಲೇಬೇಕು).

## ಪ್ರಸಂಗದ ಟಿಪ್ಪಣಿ

ಈ ಕೆಳಕಂಡತೆ ಪೌಲನ ನಂಬಿಕೆಯ ಕುರಿತ ಸಾರಾಂಶವನ್ನು ತಿಳಿಸಬಹುದು (27:23-25): (1) ದೇವರ ಸಾನಿಧ್ಯವನ್ನು ಅರಿಯಿರಿ (ನನ್ನ ಮುಂದೆ ನಿಂತನು); (2) ನಾನು ದೇವರ ಸ್ವಾಸ್ತ್ಯವಾಗಿರುವೆನು (ನಾನು ಯಾವಾತನಿಗೆ ಸೇರಿರುವೆನೋ); (3) ದೇವರು ನನಗೆ

ಒಂದು ಉದ್ದೇಶವನ್ನು ನೀಡಿರುವನು (ನೀನು ಕೈಸರನ ಮುಂದೆ ನಿಲ್ಲಬೇಕು).[29]

"ನಾಲ್ಕು ವಿಧವಾದ ಲಂಗರುಗಳು" (27:29) ಸಂದೇಶಕರಿಗೆ ಆಶ್ಚರ್ಯಮಾಡಿದೆ. ನನ್ನ ಅಧ್ಯಯನದಲ್ಲಿ ನಾಲ್ಕು ಆತ್ಮೀಕ "ಲಂಗರುಗಳು" ಎಂಬ ಅಂಶಗಳನ್ನು ಮಾಡಿರುವೆನು. ಆದರೆ ಸತ್ಯವೇದದಲ್ಲಿ "ನಂಬಿಕೆ" ಎಂಬ ಒಂದೇ ಲಂಗರನ್ನು ತಿಳಿಸಲಾಗಿದೆ (ಇಬ್ರಿಯ 6:19). ಲಾಯಿನ್ ಒಗಿಲಿವಿಯವರು, ನಿಮ್ಮದೇ ಆದ ಲಂಗರನ್ನು ಹೊಂದಿ ಒಂದೆಡೆಯಿಂದ ತಪ್ಪಿಸಿಕೊಂಡಿರ ಬಹುದು ಎಂದು ಹೇಳಿರುವರು. (1) ಅಂಥವುಗಳನ್ನು ದಾಖಲಿಸಿರಿ, ಜನರು ತಮ್ಮಲ್ಲಿರುವದನ್ನು ಕಂಡು ಹಿಡಿಯಲು ಪ್ರೋತ್ಸಾಯಿಸಿರಿ.[30]

---

ಟಿಪ್ಪಣಿಗಳು

[1]John Pollock, *The Apostle: A Life of Paul* (Wheaton, Ill.: Scripture Press Publications, 1985), 280. [2]ನನ್ನ ಮೂರು ಸಲಹೆಗಳು. [3]ಕರ್ತನು ತಾನೇ ಪೌಲನಿಗೆ ಕಾಣಿಸಿಕೊಂಡನು. ಯೇಸುವಿನ ಬದಲಾಗಿ ದೇವದೂತನು ಕಾಣಿಸಿಕೊಂಡನು. "ಯೇಸು ಹೇಳಿದನು ಎಂಬ ಹೇಳಿಕೆಗಿಂತಲೂ, ದೇವದೂತನು ಹೇಳಿದನು" ಎಂಬ ಹೇಳಿಕೆಯನ್ನು ಹಡಗಿನವರು ಅರ್ಥಮಾಡಿಕೊಂಡಿದ್ದರು. ಹೇಗೂ ನಿರೀಕ್ಷೆಯ ಸಂದೇಶವು ಒಂದೇ ಆಗಿತ್ತು (18:9, 10; 23:11 ನೋಡಿ). [4]ಪೌಲನು ರೋಮಾಯಕ್ಕೆ ಹೋಗುವನು ಎಂಬ ಯೇಸುವಿನ ಹೇಳಿಕೆಯು ನಿಶ್ಚಯವಾಗಿತ್ತು (23:11); ಕೈಸರನ ಮುಂದೆ ಪೌಲನು ನಿಲ್ಲುವನು ಎಂಬ ನಿಶ್ಚಯ. [5]ಹಡಗಿನವರೆಲ್ಲ ಪೌಲನ ಮೂಲಕ ಕ್ರೈಸ್ತರಾದರು ಎಂಬ ಅರ್ಥವಲ್ಲ, ಆದರೆ ಅವರು ಬದುಕುಳಿದರು. (ಇಂಟರ್ ನ್ಯಾಶನಲ್ ಕಾಮೆಂಟರಿ [Grand Rapids, Mich.: Wm. B. Eerdmans Publishing Co., 1988], 488.) ಗಲಾತ್ಯ 18:26-32; 30:27; 39:5 ನೋಡಿರಿ. [6]ಕೀರ್ತನೆ 34:18; 145:18; ಯೆಶಾಯ 41:10; 43:1-5; ರೋಮಾಪುರ 8:38, 39 ನೋಡಿರಿ. [7]ಗ್ರೀಸ್ ಮತ್ತು ಇತಾಲ್ಯದ ನಡುವಿನ ಅದ್ರೀಯ ಸಮುದ್ರವೆಂದು ಭಾವಿಸಬೇಡಿರಿ. ಪುರಾತನ ಬರಹದ ಪ್ರಕಾರ ಮೆಡಿಟೇರಿನಿಯನ್ ಪೂರ್ವ ಸ್ಥಳವನ್ನು "ಅದ್ರಿಯಾ" ಎನ್ನುತ್ತಿದ್ದರು. [8]ಲಂಗರುಗಳ ಶಬ್ದ (ಅಂದಾಜು ಆರು ಅಡಿಗಳು). [9]ಹಡಗನ್ನು ಭದ್ರಪಡಿಸಲು ಸಾಕಷ್ಟು ಲಂಗರುಗಳನ್ನು ಬಳಸಿದರು. [10]ಯಾರು ಸಾಯುವದಿಲ್ಲ ಎಂಬ ದೇವ ವಾಗ್ದಾನವು ಅವರಲ್ಲಿ ನಿರೀಕ್ಷೆ ನೀಡಿತ್ತು (ವಚನ 22).

[11]ಮರುದಿನ ದೋಣಿಯ ಮೂಲಕ ಪಾರಾಗಬಹುದೆಂದು ತಿಳಿದಿದ್ದರು, ಅಲ್ಲಿ ಉದ್ದೇಶ ಮಾತ್ರ ಈಡೇರಿತು. [12]ದೇಹವನ್ನು ಬಲಪಡಿಸುವ ಯೋಚನೆ. ಉದ್ವೇಗಕ್ಕೊಳಗಾಗುವವರು ದೈಹೀಕ ಕೊರತೆಗಳನ್ನು ಹೊಂದಿರುತ್ತಾರೆ. [13]ಅವರು ಅಲ್ಪ ಆಹಾರವನ್ನು ಸೇವಿಸಿದ್ದರೇ ವಿನಃ, ಸಾಕಷ್ಟು ಆಹಾರವನ್ನು ಸೇವಿಸಿರಲಿಲ್ಲ (ವಚನ 21). ಆಹಾರವನ್ನು ತೆಗೆದುಕೊಳ್ಳದ ಮಗುವಿಗೆ ಅದರ ತಾಯಿಯು ಒತ್ತಾಯ ಮಾಡುವಂತೆ, ಪೌಲನು ಮಾಡಿದ್ದನು! ಅವರು ತಮ್ಮ ದೇವತೆಗಳಿಗಾಗಿ ಉಪವಾಸ ಮಾಡಿರಬಹುದು, ಅದನ್ನು ವಾಕ್ಯವು ತಿಳಿಸುವದಿಲ್ಲ. [14]ಇದು ಉತ್ತಮ ಹೇಳಿಕೆ (1 ಸಮುವೇಲ 14:45; 2 ಸಮುವೇಲ 14:11; 1 ಅರಸು 1:52; ಲೂಕ 21:18). [15]ಇದು ಕರ್ತನ ಭೋಜನವಾಗಿರದೆ ಸಾಮಾನ್ಯ ಊಟವಾಗಿತ್ತು. [16]ಲೂಕನು ವಚನ 37ರವರೆಗೆ ಕಾದನು, "276 ಜನರು ಹಡಗಿಲ್ಲಿದ್ದೆವು" ಊಟವನ್ನು ಸಿದ್ಧಪಡಿಸಲು ತಲೆಗಳ ಲೆಕ್ಕಾಚಾರವನ್ನು ಮಾಡಿರಬಹುದು. ತೀರವನ್ನು ಎಲ್ಲರು ಸೇರಿದರು ಎಂಬ ಖಾತ್ರಿಗಾಗಿ ಲೆಕ್ಕ ಮಾಡಿರಬಹುದು. [17]ನಾವು ಬಹಿರಂಗ ಸ್ಥಳದಲ್ಲಿ ತಿನ್ನುವಾಗ ಪೌಲನ ಸರಧಲ್ಲಿ ನಿಂತು ನೆಮ್ಮದಿಯಾಗಿ ಕೃತಜ್ಞತೆಸಲ್ಲಿಸೋಣ! [18]ಇದು ಸಾಂಪ್ರದಾಯಕವಾದ "ಶ್ರೀ ಪೌಲನ ತೀರ ಎಂದಿರಬಹುದು." ಅದು ಮೆಲೀತನ ಈಶಾನ್ಯ ದಿಕ್ಕಿನಲ್ಲಿತ್ತು. [19]ಹಡಗನ್ನು ತಿರುಗಿಸಲು ಬಳಸುವ ಸಾಧನ (ವ್ಯತ್ಯಾಸವು ಪ್ರಮುಖವಲ್ಲ). [20]ಎಂದು ಕಡೆಯಿಂದ ಬಂದ ನೀರಿನ ಪ್ರವಾಹವು ಮರಳನ್ನು ಹಾಗು ಕಲ್ಲುಗಳನ್ನು ದಿಬ್ಬವನ್ನಾಗಿ ಮಾಡಿತ್ತು. ನಾವಿಕರು ಅದನ್ನು ಗಮನಿಸಲಿಲ್ಲ "ಪೌಲನ ತೀರ."

[21]ಅಪೊಸ್ತಲರ ಕೃತ್ಯಗಳು 12:19ರ ಟಿಪ್ಪಣಿಯನ್ನು *ಅಪೊಸ್ತಲರ ಕೃತ್ಯಗಳು 3ನೇ,* ಪುಸ್ತಕದ *"ದೇವರು ಮಾಡಿರುವ ಸಕಲ ಕಾರ್ಯಗಳು"* ಎಂಬ ಪಾಠದಲ್ಲಿ ನೋಡಿರಿ. [22]"ಸಿಂಹಪಾಲು" ಸಿಂಹದ ಆಹಾರ ಹಿಂದಿನ ಪಾಠದ 27:1ರ ಟಿಪ್ಪಣಿ ನೋಡಿರಿ. [23]ಇತರೆ ಖೈದಿಗಳ ಬಗ್ಗೆ ಶತಾಧಿಪತಿಯು ಚಿಂತನೆ ಮಾಡಿದನು ಎಂದಿರುವದಿಲ್ಲ. ಇತರೆ ಖೈದಿಗಳು ಪೌಲನಿಗೆ ಋುಣಿಯಾಗಿದ್ದರು. [24]ಶತಾಧಿಪತಿಯ ಆಕಸ್ಮಿಕವಾಗಿ ಸಿಪಾಯಿಗಳ ವಿಚಾರವನ್ನು ತಿಳಿದು, ಅದನ್ನು ತಪ್ಪಿಸಿರಬಹುದು ಅಥವಾ ಖೈದಿಗಳನ್ನು

ಕೊಲ್ಲೋಣ ಎಂಬ ಅಪ್ಪಣೆಯನ್ನು ಪಡೆಯಲು ಇಚ್ಚಿಸಿರಬಹುದು. ಆದರೆ ಯೂಲ್ಯನ "ಬೇಡ" ಎಂದು ಹೇಳಿರಬಹುದು. [25]ಈಜು ಬರುವ ಸಿಪಾಯಿಗಳು ಮೊದಲು ಹೋಗಿರಬಹುದು, ನಂತರ ಅವರು ಖೈದಿಗಳು ತಪ್ಪಿಸಿಕೊಳ್ಳದಂತೆ, ಅವರನ್ನು ಸ್ವೀಕರಿಸಿರಬಹುದು. [26]ಮೂರು ಹಡಗಿನ ಅಪಘಾತಗಳಲ್ಲಿ ಬಾಗಿಯಾಗಿದ್ದ ಪೌಲನು, ಯೋಜನೆಯನ್ನು ನೀಡಿರಬಹುದು. "ಪೌಲನು ರಾತ್ರಿ ಹಗಲು ಸಮುದ್ರದಲ್ಲಿ ಕಳೆದು ಬದುಕಿದ್ದನು" (2 ಕೊರಿಂಥ 11:25). ಹಡಗಿನ ತುಂಡನ್ನು ಹಿಡಿದು ಬದುಕಿರಬಹುದು. [27]2 ಥೆಸಲೋನಿಕ 3:16; ಇದನ್ನು ನೋಡಿರಿ ಕೀರ್ತನೆ 29:11; ಯೋಹಾನ 14:27; 16:33; ರೋಮಾಪುರ 1:7; 2:10; ಕೊಲೊಸ್ಸೆ 3:15 ನೋಡಿರಿ. [28]4 ಸಂಗತಿಗಳು, "ಯೋಜನೆಯ ಕಾರ್ಯರೂಪ" ಪಾಪಿಗಳಿಗಾಗಿ ದೇವರ ಯೋಜನೆ ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನಮಾಡಿಸಿಕೊಳ್ಳುವದು (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38). [29]Adapted from Rick Atchley, "Anchors for the Anxious," Sermon preached at the Southern Hills church of Christ, Abilene, Texas, on 19 April 1987. [30]Lloyd Ogilvie, *The Communicator's Commentary,* vol. 5, *Acts* (Dallas: Word Publishing, 1983), 349; emphasis mine.